ಲೇಖನ 03

# ಹಕ್ಕಿ ಗೂಡಿನ ಅಣಬೆಗಳು

ಅದ್ಭುತ ಅಣಬೆ, ಮಳೆಗಾಲ ಆರಂಭ ಕಾಡು ಮತ್ತು ನಾಡಿನಲ್ಲಿ ಕೊಳೆತ ಪ್ರದೇಶ, ಒಣಗಿ ಬಿದ್ದಗಿಡ, ದಿಮ್ಮೆ, ಕಟ್ಟಿಗೆಗಳ ಮೇಲೆ ಕೊಳೆತಿನಿಗಳದೆ ಕಾರುಬಾರು. ಕೆಲವು ಜನ ಇದನ್ನು ನಾಯಿಕೊಡೆ. ಛೀಛೀ. ಹೊಲಸು ಅಂತಾ ಇವುಗಳಿಂದ ದೂರ ಸರಿಯುವುದೆ ಹೆಚ್ಚ ಆದ್ರೆ ಇವುಗಳ ಪರ್ಕೃತಿಯಲಿ ಇವಗಳ ಪಾತ್ರ ಬಹುಮುಖ್ಯ. ಈ ಶಿಲೀಂದ ಸಾಮ್ರಾಜ್ಯವು ಜೀವ ಸಾಮ್ರಾಜ್ಯದ 3ನೇ ದೊಡ್ಡ ಸಾಮ್ರಾಜ್ಯವಾಗಿದೆ. ವಿಶೇಷವಾಗಿ ಮಲೆನಾಡು, Western ghats & Eastern ghats ದಲ್ಲಿ ತಿನ್ನಲು-ತಿನ್ನಲು ಯೋಗ್ಯವಲ್ಲದ ಅನೇಕ ಅತಿ ಸುಂದರರೂಪ, ಚಿತ್ರವಿಚಿತ್ರ ಆಕಾರ, ಬಣ್ಣಬಣ್ಣದ ಅಣಬೆಗಳು ನೋಡಲು ಬಲುಚೆಂದ. ಅಂತಹ ಲೋಕದ ಅಣಬೆಗಳಲಿ ಈಗ ನಾನು ಹೇಳಲೂ ಹೊರಟ ಒಂದು ಎಂದೂ ಮರೆಯಲಾಗದ ಸವಿನೆನಪಿನ ಅತೀ ಚಿಕ್ಕ ಅಣಬೆ.

ಈ ಅಣಬೆಯನು (ಹಕ್ಕಿ-ಗೂಡಿನಅಣಬೆ) - Bird Nest Fungi. ಇದು Nudulariaceae ಡ (Cyathus striatus) . Nudulus -ಚಿಕ್ಕಗೂಡು ಅಂತ ಅರ್ಥ. ಈ ಅಣಬೆಗಳ ಆಕಾರವು ಹಕ್ಕಿಯ ಗೂಡಿನ ಹಾಗೆ ಇದು ಗೂಡಿನಲ್ಲಿ ಮೊಟ್ಟೆಗಳು ಇರುವ ರೀತಿ ಇರುತ್ತವೆ. ಇದು cup ಆಕಾರದಲ್ಲಿದು ಸಾಮಾನ್ಯವಾಗಿ 3-8 ಮೊಟ್ಟೆಗಳ ಆಕಾರದ ಬೀಜಕಗಳು, 4-18mm ಎತ್ತರ & 3-9mm ಅಗಲ ಇವುಗಳು 2cm ಗಿಂತಲು ಕಡಿಮೆ ದೇಹಹೊಂದಿವೆ. ದೇಹದ ಮೇಲ್ಬಾಗವು ಕೂದಲಿನ ಹಾಗೆ ಆವರಿಸಿಕೊಂಡಿವೆ ಮೊಟ್ಟೆ ರೀತಿಯ peridioles - ಮೊಟ್ಟೆಗಳು ಬೆಳೆದಿರುತ್ತವೆ. ಇವುಗಳು ಸಾಮನ್ಯವಾಗಿ ಅವರೆ ಕಾಳಿನ ಆಕಾರದಲಿದು (Lenticular shape)1-4mm ಗಾತ್ರ ಹೊಂದಿರುತ್ತವೆ.



ಚಿತ್ರ ಕೃಪೆ: ಧನಂಜಯ್ ಕುಮಾರ್

ಇವುಗಳು ಕಪ್ಪು,ಬಿಳಿ, ಕೆಂಪು ಮಿಶ್ರಿತ ಕಂದು ಬಣ್ಣಗಳಲ್ಲಿ ಇರುತವೆ. ಈ ಮೊಟ್ಟೆಗಳೇ ಬೀಜಕಗಳಾಗಿ ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಸಂತಾನೋತ್ಪತ್ತಿಯು ಲೈಂಗಿಕ & ಅಲೈಂಗಿಕವಾಗಿ ನಡೆಯುತ್ತದೆ. Peridioles ಗಳು ಮಳೆಯಿಂದ ಪ್ರಸರಣಗೊಂಡು ಮತ್ತೆ ಸೂಕ್ತವಾದ ವಾತವರಣದಲ್ಲಿ ಒಣಗಿದ ಕಟ್ಟಿಗೆ, ಸಣ್ಣ ಕಟ್ಟಿಗೆ ತುಂಡು, ಜೀವಂತ ಮರಗಳ ಕೊಳೆತ ಭಾಗಗಳಲ್ಲಿ ಕಾಣಸಿಗುತ್ತವೆ. ಇವುಗಳೂ ಸಾಮಾನ್ಯವಾಗಿ ಸಮಶೀತೋಷ್ಣವಲಯದ ಎಲ್ಲ ಭಾಗಗಳಲ್ಲಿಯೂ ಕಂಡು ಬರುತ್ತವೆ. ಇವಗಳ ಬೆಳವಣಿಗೆಗೆ ಸೂಕ್ತವಾದ ವಾತಾವರಣ ಮತ್ತು ಹೊರ ವಾತಾವರಣ ಉಷ್ಣ & ತೇವಾಂಶ ಯುಕ್ತ ಗಾಳಿ ಪಾತ್ರವಹಿಸುತ್ತವೆ. ಅಣಬೆಗಳು ಅಂತಿಮ ಕೊಳೆಸುವ ಜೀವಿಗಳಾಗಿ ಪರಿಸರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ಗುಂಡಪ್ಪ ಎಸ್**
ಗಸ್ತು ಅರಣ್ಯಪಾಲಕ,
ಲೋಂಡಾ ವಲಯ, ಬೆಳಗಾವಿ ವಿಭಾಗ
ಇಮೇಲ್: gstalwar777@gmail.com